doc-41
T.P-2

Regd No M 1229 | 43rd Year | Sri 'Satyavadi' Mysore | 25—4—1959

ಪ್ರಮುಖ ಪ[illegible]ಗಳಿಗೆ
ಅಕರ್ಷಕ [illegible]ಲೇಖನಗಳಿಗೆ
"ಸತ್ಯವಾದಿ" [illegible]ತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅರಮನೆ ಸಂಸ್ಥೇದಾರ್ ಎಂ. ವಿ. ಸುಬ್ಬರಾಯರು [ಬಿಡಿ ಪ್ರತಿ 3ಪೈ

Protecithe cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ವರದಕ್ಷಿಣೆ ಕೊಟ್ಟರೆ, ಪಡೆದರೆ ರೂ. 5 ಸಹಸ್ರದ ವರಿಗೆ ಜುಲ್ಮಾನೆ

ನವ ದೆಹಲಿ 24 — ವರದಕ್ಷಿಣೆ ನಿರೋಧ ಮಸೂದೆ ಲೋಕಸಭೆಯಲ್ಲಿ ಮಂಡಿತವಾಯಿತು. ಕಾಯ್ದೆ ಮಂತ್ರಿ ಶ್ರೀ ಎ ಕೆ ಸೇ॥ ಮಂಡಿಸಿದರು. ದೇಶದಲ್ಲಿ ಪದೇಪದೇ ಒತ್ತಾಯವಾಗಿ ಮಂಡಿತವಾದ ಈ ಮಸೂದೆಯಲ್ಲಿ ವರದಕ್ಷಿಣೆ ಕೊಡುವದು, ಸ್ವೀಕರಿಸುವದು ಅಪರಾಧವೆಂದು ತಿಳಿಸಿದೆ. ಅಪರಾಧ ಮಾಡಿದರೆ 6 ತಿಂಗಳ ವರಿಗೆ ಸಜೆ ಅಥವಾ ರೂ 5 ಸಾವಿರದ ವರಿಗೆ ದಂಡ ಅಥವಾ ಎರಡನ್ನೂ ವಿಧಿಸಲಾಗುವದು. ಮದುವೆ ಸ್ಥಿರಾಸ್ತಿಯಾಗಿದ್ದ ಬಟ್ಟೆ ಆಭರಣಗಳಿಗೆ ಇದನ್ವಯಿಸುವದಿಲ್ಲ. ಆದರೆ ರೂ 2 ಮಿತಿಯಲ್ಲಿರಬೇಕು.

ನೆಹರು ಹೇಳಿಕೆ

ಮುಸ್ಸೂರಿ 24 — ದ ಲಾ ಯ ಲಾಪಾಂವರು ಚೀನಾ ಕಮ್ಯಾಂಡರಿಗೆ ಕಾಗದವರೆದಿದ್ದರೆಂದು, ಚೀನಾದೊಡನೆ ಸಂಬಂಧ ಕಡಿದುಹೋಗುವದನ್ನು ತಪ್ಪಿಸಲು ಅವರು ಬಹಳ ಯತ್ನಿಸಿದರೆಂದು ಪ್ರಧಾನಿ ನೆಹರು ಪತ್ರಿಕೆಯವರಿಗೆ ತಿಳಿಸಿದರು.

ಕಣಮುಖ

ನವ ದೆಹಲಿ 24 — ಭಾರತದ ಗೃಹ ಮಂತ್ರಿ ಪಂ॥ ಗೋವಿಂದ ವಲ್ಲಭಪಂತರು ಹೃದ್ರೋಗದಿಂದ ಈಗ ಗುಣಮುಖರಾಗುತ್ತಿದ್ದಾರೆ.

ಬೆಲೆ ಮಟ್ಟ ಏರಲಿ

ನವ ದೆಹಲಿ 24 — ಕೇಂದ್ರ ಆಹಾರ ಮಂತ್ರಿ ಶ್ರೀ ಅಜಿತ ಪ್ರಸಾದ ಜೈನ್ ಅವರು ಪ್ರಾದೇಶಿಕ ಆಹಾರ ಡೈರೆಕ್ಟರರ ಸಭೆಯಲ್ಲಿ ಭಾಷಣ ಮಾಡುತ್ತಾ, ಆಹಾರ ಧಾನ್ಯಗಳಿಗಾಗಿ ಆಹಾರ ಮಟ್ಟ ಉಳಿಸಿಕೊಳ್ಳಬೇಕೆಂದು ನುಡಿದರು.

ರಾಕ್‌ಫೆಲ್ಲರ್ ನಿಧಿ

ನ್ಯೂಯಾರ್ಕ್ 23 — ಬೆಂಗಳೂರಿನ ಭಾರತ ವಿಜ್ಞಾನ ಮಂದಿರಕ್ಕೆ ಬಯೋಕೆಮಿಸ್ಟ್ರಿ ಮತ್ತು ಫಾರ್ಮಕಾಲಜಿ ವಿಭಾಗದಲ್ಲಿ ಸಂಶೋಧನಾ ಕಾರ್ಯಕ್ಕೆ ನೆರವು ಕೊಡಲು ರಾಕ್‌ಫೆಲ್ಲರ್ ಸಂಸ್ಥೆ ಮೂರು ವರ್ಷದ ಅವಧಿಗೆ ಮೇಲ್ಪಟ್ಟು 26 ವರೆ ಸಾವಿರ ಡಾಲರು ಗ್ರಾಂಟು ಇತ್ತಿದೆ.

ಅಂಥನಿಯವರ ಮನವಿ

ನವ ದೆಹಲಿ 24 — ಇಂಗ್ಲೀಷು ಭಾಷೆಯನ್ನು ಭಾರತದ ರಾಷ್ಟ್ರಭಾಷೆ ಆಗಿ ಭಾರತದ ಘಟನೆಯ 8 ನೇ ಷೆಡ್ಯೂಲಿನಲ್ಲಿ ಸೇರಿಸಬೇಕೆಂದು ಲೋಕಸಭೆಯಲ್ಲಿ ಶ್ರೀ ಫ್ರಾಂಕ್ ಅಂಥನಿ ಈ ದಿನ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಂಡರು.

ಹೊಸ ಮಸೂದೆ

ನವ ದೆಹಲಿ 24 — ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಖಾಲಿ ಆಗುವ ಉದ್ಯೋಗಗಳನ್ನು ಕಡ್ಡಾಯವಾಗಿ ಉದ್ಯೋಗ ವಿನಿಮಯ ಸಂಸ್ಥೆಗಳಿಗೆ ತಿಳಿಸಬೇಕೆಂಬ ಮಸೂದೆ ಲೋಕಸಭೆಯಲ್ಲಿ ಮಂಡಿತವಾಯಿತು. ಕೆಲಸಕ್ಕೆ ಉದ್ಯೋಗ ವಿನಿಮಯ ಸಂಸ್ಥೆ ಸೂಚನೆ ಮಾಡುವ ಅಭ್ಯರ್ಥಿಗಳನ್ನೇ ನೇಮಿಸಬೇಕೆಂಬ ನಿಬಂಧನೆ ಇಲ್ಲ.

ಮಂತ್ರಿಯ ಭರವಸೆ

ನವ ದೆಹಲಿ 24 — ವಿದೇಶಗಳಿಂದ ಹೊಸದಾಗಿ ಸ್ಟೀಪರುಗಳನ್ನು ತರಿಸುವದಿಲ್ಲವೆಂದು ರೈಲ್ವೆ ಮಂತ್ರಿ ಶ್ರೀ ಜಗಜೀವನ ರಾಂ ಲೋಕಸಭೆಯಲ್ಲಿ ತಿಳಿಸಿದರು.

ಬಳ್ಳಾರಿಗೆ ಜಾರಿ

ಮದ್ರಾಸು ಮಕ್ಕಳ ಕಾನೂನಿನ ಅನ್ವಯ ಬಳ್ಳಾರಿಯಲ್ಲಿ ಮಕ್ಕಳ ನ್ಯಾಯಾಲಯದ ಸ್ಥಾಪನೆ ಆಗಿದೆ.

ಆಗಮನ

ಮದ್ರಾಸು ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಪಿ ವಿ ಚೆರಿಯನ್ ಭಾನುವಾರ ಮಧ್ಯಾಹ್ನ ಬೆಂಗಳೂರಿಗೆ ಆಗಮಿಸಿ 2 ದಿನ ಇರುವರು.

ರಾಜೀನಾಮೆ

ಬೆಳ್ಳೂರು 24 — ಪುರಸಭಾಧ್ಯಕ್ಷ ಶ್ರೀ ಬಿ ಎಸ್ ಜಾಣಲನಯ್ಯನವರು ಅಧ್ಯಕ್ಷ ಪದವಿಗೆ ರಾಜೀನಾಮೆ ಅರ್ಪಿಸಿದರು. 15 ಸದಸ್ಯರ ಪೈಕಿ 10 ಸದಸ್ಯರು ಅವರ ಮೇಲೆ ಅವಿಶ್ವಾಸ ವ್ಯಕ್ತಪಡಿಸಿದ್ದರು.

ವಿಶ್ವಶಾಂತಿಗೆ

ಧಾರವಾಡ 24 — ಗಾಂಧಿ ತತ್ವದ ಬಗ್ಗೆ 5 ದಿನಗಳ ಸಮ್ಮೇಳನವನ್ನು ಜನತಾ ಕಾಲೇಜು ಪ್ರದೇಶದಲ್ಲಿ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಶ್ರೀ ರಂಗನಾಥ ದಿವಾಕರರು ಪ್ರಾರಂಭಿಸುತ್ತ, ವಿಶ್ವದಲ್ಲಿ ಶಾಂತಿ ಮತ್ತು ಸೌಹಾರ್ದ ಸ್ಥಾಪನೆಗೆ ಗಾಂಧಿ ತತ್ವ ಪ್ರಸಾರದ ಅಗತ್ಯತೆಯನ್ನು ವ್ಯಕ್ತಪಡಿಸಿದರು.

ಕರ್ತವ್ಯ ಪಾಲಿಸಿ

ಬೆಂಗಳೂರಿನ ಗೋಪಾಲಪುರಂನಲ್ಲಿ ಹರಿಜನರ ಸಮ್ಮೇಳನದಲ್ಲಿ ಶ್ರೀಗಳಾದ ಬಿ ಡಿ ಜತ್ತಿ, ಎಸ್. ರಾಚಯ್ಯ ಮತ್ತು ಬಿ. ಬಸವಲಿಂಗಪ್ಪನವರು ಮಾತನಾಡಿ ಹರಿಜನರು ತಮ್ಮ ಹಕ್ಕು ಮತ್ತು ಕರ್ತವ್ಯ ಅರಿತುಕೊಳ್ಳಬೇಕೆಂದು ನುಡಿದರು.

ವಿವಿಧ ವರ್ತಮಾನ

ನವ ದೆಹಲಿ 23 — ಭಾರತಕ್ಕೆ ಬೇಕಾಗಿರುವ ಶಕ್ತಿ ಮತ್ತು ಶಾಂತಿಯನ್ನು ಡಾಲರ್ ಸಾಲದ ಸೂಚನೆಯೆಂದು ಅರ್ಥ ಮಾಡಿಕೊಳ್ಳದಿರುವಂತೆ ಪಾಕಿಸ್ತಾನಕ್ಕೆ ರಕ್ಷಣಾ ಮಂತ್ರಿ ಶ್ರೀ ವಿ ಕೆ ಕೃಷ್ಣಮೆನನ್ ಸೂಚಿಸಿದರು. ಹಣಕಾಸಿನ ಮಸೂದೆಯ ಬಗ್ಗೆ ಶ್ರೀ ಮೆನನರು ಲೋಕಸಭೆಯಲ್ಲಿ ಮಾತನಾಡುತ್ತಾ ಈ ರೀತಿ ತಿಳಿಸಿದರು.

ಬೆಂಗಳೂರು 24 — ವಿಧಾನಸಭೆ ಪರಿಶೀಲಿಸುತ್ತಿರುವ ಪೈಸೂರು ಗ್ರಾಮ ಪಂಚಾಯಿತಿಗಳು ಮತ್ತು ಜಿಲ್ಲೀಕರಣ ಸಮಿತಿಗಳ ಮಸೂದೆಯ ಜಂಟಿ ಸೂಚಿ ಸಮಿತಿಯು ವಂದಿಯನ್ನು, ಗಾಂಧೀಜಿಯು ಕನಸಿನ ರಾಮರಾಜ್ಯದ ಗುರಿಯು ಸಾಧನೆಗೆ ಹೆಜ್ಜೆಯಾಂತಿರುವದೆಂದು ಪ್ರಶಂಸಿಸಲಾಯಿತು.

ಕಂಠಿ 24 — ಪತ್ರಿಕಾ ವರದಿಗಾರರೊಡನೆ ಪಾಕಿಸ್ತಾನದ ಅಧ್ಯಕ್ಷ ಜ॥ ಅಯುಬ ಖಾನರು ಮಾತನಾಡುತ್ತಾ, ಭಾರತದ ಪ್ರದೇಶದ ಮೇಲೆ ಧಾಳಿ ನಡೆಸಿದರೆ ಪಾಕಿಸ್ತಾನ ಭಾರತ ಜಂಟಿ ರಕ್ಷಣಾ ಕಾರ್ಯ ಕೈಗೊಳ್ಳುವುದಾಗಿ ತಿಳಿಸಿದರು.

ಉದಕಮಂಡಲ 24 — ಕಳೆದ ರಾತ್ರಿ ಇದ್ದಂ ಹಠಾತ್ತಿಂದ ಕರ್ಫ್ಯೂ ಹಾಕಿಕೊಂಡದ ಬಳಿ ಬಸ್ ದುರ್ಘಟನೆ ಆಗಿ ಹದಿನೆಂಟು ಜನರು ಮರಣಹೊಂದಿದರು. ಆಸ್ಪತ್ರೆಗೆ ದಾಖಲಾಗಿರುವ ನಾಲ್ಕು ಜನರ ಪರಿಸ್ಥಿತಿ ವಿಷಮಿಸಿದೆ.

ನವ ದೆಹಲಿ 24 — ಈ ವರ್ಷದ ಕೊನೆಯೊಳಗೆ ಮೂರನೆಯ ಪಾಂಚ ವಾರ್ಷಿಕ ಯೋಜನೆಯ ಕರಡು ಸಿದ್ಧವಾಗುವದು.

ನಾಳೆಯ ಪಂಚಾಂಗ

ಅ॥ ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

26 ಚೈತ್ರ ಜ್ಯೇಷ್ಠ

ರಷ್ಯಾದಲ್ಲಿ ಭಾರತೀಯ ಲೇಖಕರ ಕೃತಿಗಳ ಪ್ರಕಟಣೆ

ಭಾರತೀಯ ಸಾಹಿತ್ಯದ ಬಗ್ಗೆ ಸೋವಿಯತ್ ಜನರ ಆಸಕ್ತಿ ಇತ್ತೀಚಿನ ವರ್ಷಗಳಲ್ಲಿ ಬಹಳವಾಗಿ ಹೆಚ್ಚಿದೆ; ಈಗಾಗಲೇ ನೂಂಕ್ಕೂ ಹೆಚ್ಚು ಮಂದಿ ಕಾ ಸಿಕಲ್ ಮತ್ತು ಸಮಕಾಲೀನ ಭಾರತೀಯ ಲೇಖಕರ ಕೃತಿಗಳನ್ನು ಸೋವಿಯತ್ ಜನರಿಗೆ ಪರಿಚಯ ಮಾಡಿಕೊಡಲಾಗಿದೆ — ಮಹತ್ತರ ಆಶಾವಾದ ಮತ್ತು ಪ್ರಪಂಚದಲ್ಲಿ ನ್ಯಾಯಕ್ಕೇ ಜಯವೆಂಬುದರಲ್ಲಿ ದೃಢನಂಬಿಕೆ. ಇವುಗಳಿಂದ ಪ್ರೇ ರಿತವಾದ ಭಾರತೀಯ ಲೇಖಕರ ಬಗ್ಗೆ ಗೌರವ ಮತ್ತು ಪ್ರೇಮಭಾವನೆಗಳನ್ನು ಮೂಡಿಸಿವೆ — ಕಳೆದ ಶತಮಾನದಲ್ಲಿ ಪ್ರಖ್ಯಾತ ರಷ್ಯನ್ ಕವಿ ಝುಕೊವಸ್ಕಿ ಮಹಾಭಾರತದಿಂದ ನಲ-ದಮಯಂತಿಯನ್ನೂ ಕರಂಜಿನ್‌ರವರು ಅ ಮ ರ ಕ ವಿ ಕಾಳಿದಾಸನ ಶಾಕುಂತಲ ಮತ್ತು ಮೇಘದೂತಗಳನ್ನೂ, ಬೇರ್ಗಿನ್‌ರವರು ಮಹಾ ಭಾರತದಿಂದ ಸುಂದೋಪಸುಂದ ಮತ್ತು ಸತ್ಯವಾಕ್ ಸಾವಿತ್ರಿ ಕಥೆಗಳನ್ನೂ, ಪು ಗ್ವೇಲ ಮತ್ತು ಇತರ ಕೃತಿಗಳಿಂದ ಕೆಲವು ಭಾಗಗಳನ್ನೂ ಭಾಷಾಂತರ ಮಾಡಿದರು ಪುರಾತನ ಭಾರತೀಯ ಸಾಹಿತ್ಯದ ಬಗ್ಗೆ ಪ್ರಖ್ಯಾತ ಸಂಸ್ಕೃತ ವಿದ್ವಾಂಸ ಪ್ರೊ॥ ವಿನಯೋವ್ ಅನೇಕ ಪ್ರಬಂಧಗಳನ್ನು ರಚಿಸಿದರು : ಭಾರತೀಯ ಸಾಹಿತ್ಯ ಮತ್ತು ಸಂಸ್ಕೃತ ಭಾಷೆಯನ್ನು ಅಭ್ಯಾಸ ಮಾಡಿದ ಬಳಿಕ ಚೆರ್ನಿಷೆವಸ್ಕಿಯವರು ' ಸಾಮ್ಯವ' ಭಾಷೆ ಮತ್ತು ಸಂಸ್ಕೃತ ಭಾಷೆಗಳ ನಡುವಿನ ಸಾದೃಶ್ಯತೆಗಳು ' ಎಂಬ ಪ್ರಖ್ಯಾತ ಕೃತಿಯನ್ನು ರಚಿಸಿದರು — 20 ನೇ ಶತಮಾನದ ಆದಿ ಭಾಗದಲ್ಲಿ ಖಿತ್ರುಕ್ ಕವಿ ಬಾಲ್‌ಮೋಂತರು ಶಾಕುಂತಲಾ ನಾಟಕವನ್ನು ಭಾ ತಾರಿಸಿದರು; ಅಶ್ವಘೋಷನ ಬೀದ್ಧಚರಿತವೂ ಮುದ್ರಿಸಲ್ಪಟ್ಟಿತು.

ನಿಮಗಿದು ಗೊತ್ತೆ ?

ಹಕ್ಕಿಗಳಿಗೆ ಸಿಡಿಲು ಬಡಿಯುವುದೇ ಇಲ್ಲ ; ಏಕೆಂದರೆ ಅವುಗಳ ಪುಕ್ಕಗಳು ಅತ್ಯುತ್ತಮ ವಿದ್ಯುತ್ ನಿರೋಧಕಗಳು.

ಂ ಂ ಂ ಂ

ಮನುಷ್ಯನ ಶರೀರದಲ್ಲಿ ಪ್ರತಿ ಸೆಕೆಂಡಿಗೂ 3000000 ದಷ್ಟು ಹೊಸ ಕೆಂಪು ರಕ್ತಕಣಗಳು ಅಸ್ತಿತ್ವಕ್ಕೆ ಬರುತ್ತಿರುತ್ತವೆ.

ಂ ಂ ಂ ಂ

ಚಾಕು, ಮುಳ್ಳು ಚಮಚಕ್ಕಿಂತ1 ಲಕ್ಷ ವರ್ಷಕ್ಕಿಂತ ಹೆಚ್ಚು ಹಳತಾದುದು : ಮುಳ್ಳು ಚಮಚವನ್ನು ಮೊದಲಬಾರಿಗೆ ವೆನಿಸ್ಸಿನಲ್ಲಿ ಮೂರು ಶತಮಾನಗಳು ಹಿಂದೆ ಬಳಸಲಾಯಿತು.

ಂ ಂ ಂ ಂ

ಅನೈಗಳಿಗೆಲ್ಲ ಸಮೀಪ ದೃಷ್ಟಿ ದೋಷವಿರುತ್ತದೆ.

SHAKTI SUDHA

A Superb Tonic

ಅಪೆರಾ— 26-4-59 ರಿಂದ

ಇಬ್ಬರು ಸಹೋದರಿಯರು ತಮಿಳು

ಪಾತ್ರ— ಜಮುನಿ ಗಣೇಶ್, ಸಾವಿತ್ರಿ, ನಂಬಿಯೂರ್, ಗಿರಿಜಾ, ದೊರೈರಾಜ್

ಪ್ರತಿದಿನ 3 ಆಟಗಳು

ವುಡ್‌ಲಾಂಡ್ ಶಿ ನ್ಮ

Glorious 4th Week

ಮುನ್ನೆ ನೋಡಿದರೆ ಮುತ್ತೊನ್ನೆ ನೋಡ

ಬೇಕೆನ್ನಿಸುವ ಚಿತ್ರ

ಅನಾಡಿ

(ಹಿಂದಿ)-

ತಾರಾಗಣ- ಸೂರ್ತ್, ರಾಜ್ ಕಪೂರ್

ವೈಜಯಂತಿಮಾಲ, ಶುಭಾ ಖೋಟೆ

ಗೋಂಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣ ಪತ್ರಿಕೆಗೆ ಜೊತೆಯಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರಕ್ಕೆ

ಏಕೈಕ ಕನ್ನಡ ಪತ್ರಿಕೆ.

ಸಂಯುಕ್ತ ಅಮೇರಿಕಾದ ಸ್ಟೇಟ್ ಸೆಕ್ರಟರಿ ಶ್ರೀಯುತ ಜಾನ್ ಡಲ್ಲಾಸ್ ಪ್ಯಾರಿಸ್ಸಿನಲ್ಲಿ ತಾ|| 29 ರಂದು ಪ್ರಾರಂಭವಾಗುವ ಫ್ರಾನ್ಸು, ಬ್ರಿಟನ್, ಜರ್ಮನಿ ಮತ್ತು ಸಂಯುಕ್ತ ಅಮೇರಿಕಾದ ವಿದೇಶಾಂಗ ಮಂತ್ರಿಗಳ ಸಮ್ಮೇಳನಕ್ಕೆ ಹೋಗುವ ಅಮೇರಿಕಾ ನಿಯೋಗದ ನಾಯಕರಾಗಿರುವರು.

Edited, Printed & Published by Dharma Prachara Na Krishna Rao, at the Satyavadi Press Chamarajapet,